# ಅಪಮಾನವಾದರೆ ಒಳಿತು

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** The wordings mainly are as per Ref. 1 (given without highlights). The lyrics in Ref. 2 & Ref. 3 are similar to Ref. 1 except few differences which are marked in yellow highlights.
5. Note: The singer has followed the wordings in Ref. 3.

ರಾಗ: ಪೂರ್ವಿ ತಾಳ: ಅಟ

ಅಪಮಾನವಾದರೆ (ಒಳ್ಳಿತು) (ಒಳಿತು) || ಪ ||
ಅಪರೂಪ ಹರಿನಾಮ ಜಪಿಸುವ ಮನುಜಗೆ || ಅಪ ||

ಮಾನದಿಂದ ಅಭಿಮಾನ ಪುಟ್ಟುವುದು
ಮಾನದಿಂದ ತಪ ಹಾನಿಯಾಗುವುದು
ಮಾನಿ (ಕೌರವನಿಗೆ) (ದುರ್ಯೋಧನಗೆ) ಹಾನಿಯಾಯಿತು ಅನು-
ಮಾನವಿಲ್ಲ ಮಾನಾಪಮಾನ ಸಮರಿಗೆ || 1 ||

ಅಪಮಾನದಿಂದಲಿ ತಪ ವೃದ್ಧಿಯಾಗುವುದು
ಅಪಮಾನದಿಂದ ಪುಣ್ಯ ಸಫಲವಾಗುವುದು
ಅಪಮಾನದಿಂದಲಿ ನೃಪ ಧ್ರುವ ರಾಯಗೆ
ಕಪಟ ನಾಟಕ ಕೃಷ್ಣ ಅಪರೋಕ್ಷನಾದನು || 2 ||

ನಾನೇನ ಮಾಡಲಿ ಯಾರಲ್ಲಿ ಪೋಗಲಿ
ಕಾನನ ಚರರಾರಾಧ್ಯ ನೀನಿರಲು

ದೀನ ರಕ್ಷಕ ನಮ್ಮ ಪುರಂದರ ವಿಠಲನೆ
ಏನು ಬೇಡೆನಗಪಮಾನವೇ ಇರಲಿ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

(ನಿತ್ಯಯಾತ್ರೆಗೆ ಬರುವ ಹರಿದಾಸರನ್ನು ಹೀನಾಯದಿಂದ ಕಾಣುವ ಜನ ಇಲ್ಲದಿರಲಿಲ್ಲ. ಅವರು ತಮ್ಮನ್ನು ಜರಿಯುವುದನ್ನು ಮೂದಲಿಸುವುದನ್ನು ದಾಸರು ಕೇಳಿ ಅದಕ್ಕಾಗಿ ದುಗುಡಪಟ್ಟುಕೊಳ್ಳದೆ ಸಮಾಧಾನ ಚಿತ್ತರಾಗಿಯೇ ಇರುತ್ತಿದ್ದರು. ತಮಗೆ ತಾವೇ ಆಡಿಕೊಂಡ ಮಾತು ಈ ಹಾಡಿನಲ್ಲಿ ಹೊರಹೊಮ್ಮಿದೆ.)

**ಮಾನದಿಂದ ಅಭಿಮಾನ** – ಮಾನವೆಂದರೆ ಜನರು ತೋರಿಸುವ ಮನ್ನಣೆ, ಗೌರವ; ಇದರಿಂದ ವ್ಯಕ್ತಿಗೆ ತನ್ನಲ್ಲಿಯೇ ಹೆಚ್ಚಿನ ಹೆಮ್ಮೆ ಒದಗುವುದು ಅಭಿ–ಮಾನ (ತನಗೆ ತಾನೇ ತೋರಿಸಿಕೊಳ್ಳುವ ಮನ್ನಣೆ, ಗೌರವ.)

**ತಪ ಹಾನಿಯಾಗುವುದು** – ಹರಿದಾಸರ ತಪಶ್ಚರ್ಯೆಯಲ್ಲಿ 'ಹರಿಯು ಪರಮ, ಸರ್ವ ಸಮರ್ಥ; ಜೀವನು ಅಲ್ಪ, ದುರ್ಬಲ' ಎಂಬ ನಿಲುವು ಆಧಾರಭೂತವಾದುದು. ತಾನೇ ಬಲವಂತನೆಂದು ಭಾವಿಸಿಕೊಂಡಾಗ, ತಪಸ್ಸು ಕೆಡುವುದು.

**ಮಾನಿ ದುರ್ಯೋಧನನಿಗೆ** – ಮಹಾಭಾರತದಲ್ಲಿ ದುರ್ಯೋಧನನಿಗೆ ಒದಗಿದ ಭಂಗವೆಲ್ಲ ಅವನ ಅಭಿಮಾನದ ಫಲವಾಗಿಯೇ. ಸರಿಯಾದ ದಾರಿಯೆಂಬ ಅರಿವಿದ್ದರೂ ಅದನ್ನು ಹಿಡಿದರೆ ತನ್ನ ಹೆಮ್ಮೆಗೆ ಊನ ಎಂಬ ಭಾವನೆಯಿಂದ ಅದನ್ನು ಹಿಡಿಯಲಿಲ್ಲ; ಹಾಗೆ ಅವನು ಕೆಟ್ಟ.

**ಅಪಮಾನದಿಂದಲಿ ನೃಪ ಧ್ರುವರಾಯಗೆ** – ದುರ್ಯೋಧನನ ದೃಷ್ಟಾಂತಕ್ಕೆ ವಿರುದ್ಧವಾದುದು ಧ್ರುವನ ದೃಷ್ಟಾಂತ. ತಂದೆಯ ತೊಡೆಯ ಮೇಲೆ ಕೂಡಲು ಹೋದ ಹುಡುಗನನ್ನು ಮಲತಾಯಿ ಹೀನಾಯವಾಗಿ ಕಂಡು ಹಳಿದುದೇ ಧ್ರುವನು ಕಾಡಿಗೆ ಹೋಗಿ ತಪಸ್ಸು ಮಾಡಲು ಕಾರಣವಾಯಿತು.

**ಕಾನನ** = ಅಡವಿ,

**ಚರರಾರಾಧ್ಯ** = moving persons worthy of high respect = Sages

**ಕಾನನ ಚರಾರಾಧ್ಯ** – ಕಾನನಚರರು ಎಂದರೆ ಅಡವಿಯಲ್ಲಿ ಅಲೆದಾಡುವ ತಾಪಸಿಗಳು; ವನೌಕಸರು. ಅವರಿಂದ ಪೂಜಿಸಲ್ಪಟ್ಟವನು.

**Classification:** Keerthane

**Ankita:** purandara vittala

**Location:** NA

**Category:** jeevana darshana

**Group Words:** Krishna, apamana, kaadu, japa, punya, Dhruva, kourava,

**Pravachana:** NA

**Explanation:** NA